"ನಂಗ್ಯಾಕೋ ಹೆದರಿಕೆಯಾಗ್ತಿದೆ ಕಣ್ರೀ. ಹಂಗೇನಾರೂ ಆದ್ರೆ ಬಾವಿ ಹಾರ್ಕಂತೀನಿ ನಾನು..."

"ಅಂತಾದ್ದೇನಾಗಿದೆಯೇ? ಬಾಯ್ಬಿಟ್ಟು ಹೇಳು..."

"ನಾಲ್ಕು ತಿಂಗಳಾಯ್ತು, ಹೊರಗಾಗಿಲ್ಲ ನಾನು..."

ಹೌಹಾರಿದ್ದ ಜನಾರ್ದನ. "ಏನಂತಿದೀಯೇ?" ಒಣಗಿದ ಗಂಟಲಲ್ಲಿ ಪ್ರಶ್ನಿಸಿದ್ದ.

"ನಲವತ್ಮೂರು ಆಯ್ತಲ್ವಾ? ಬೇಗ ಮುಟ್ಟು ನಿಂತಿರ್ಬೇಕು ಅಂದ್ಕೊಂಡಿದ್ದೆ. ಅಷ್ಟೆಲ್ಲಾ ತಪಾಸಣೆ ತೆಗೆಯೋಕೆ ಪುರುಸೊತ್ತೂ ಇರ್ಲಿಲ್ವಲ್ಲ? ಈಗ ನೋಡಿದ್ರೆ..." ಮೀನಾಕ್ಷಿ ಮುಂದೆ ಮಾತಾಡದೆ ಗಂಡನ ಕೈಯೆತ್ತಿ ತನ್ನ ಹೊಟ್ಟೆಯ ಮೇಲೆ ಸವರಿಕೊಂಡಿದ್ದಳು. ಓ ದೇವರೇ, ಹೀಗೂ ಸಾಧ್ಯವಾ, ಈ ವಯಸ್ಸಿನಲ್ಲಿ? ನಾಚಿಕೆಗೇಡು. ಜನಾರ್ದನ ಹೆಂಡತಿಗೆ ಧೈರ್ಯ ಹೇಳುವ ಹೊತ್ತಿನಲ್ಲಿ ತನಗೇ ಹೇಳಿಕೊಂಡಿದ್ದ,

"ಹಂಗೇನಾಗಿರಲ್ಲ ಪುಣ್ಯಾತ್ಗಿತ್ತಿ. ನಾಳೇನೇ ಡಾಕ್ಟ್ರ ಹತ್ರ ಹೋಗ್ಬರೋಣ..."

★★★

ನಾಮಕರಣದ ಸಂದರ್ಭದಲ್ಲಿ ಮೊಮ್ಮಗನಿಗೆ ತೊಡಿಸಬೇಕಾದ ಚಿನ್ನಾಭರಣಗಳನ್ನು ಖರೀದಿಸುವ ನೆಪದಲ್ಲಿ ಹೆಂಡತಿಯನ್ನು ಹೊರಡಿಸಿಕೊಂಡು ಪೇಟೆಗೆ ಹೊರಟಿದ್ದ ಜನಾರ್ದನ.

"ಬೇಗ ಬರ್ಬೇಕು ಮತ್ತೆ, ಕಾಯ್ತಿರ್ತೀನಿ..." ಕೈ ಬೀಸಿ ಬೀಳ್ಕೊಟ್ಟಿದ್ದಳು ನೇತ್ರಾ.

ಒಂದಾನೊಂದು ಕಾಲದಲ್ಲಿ ಇನ್ನೊಂದು ಮಗು ಆಗಲೆಂಬ ಹೆಬ್ಬಯಕೆಯಿಂದ ಹರಕೆ ಕಟ್ಟಿಕೊಂಡಿದ್ದ ದಂಪತಿ ಈಗ ಅಂತಾದ್ದೇನೂ ಆಗಿಲ್ಲದೇ ಇರಲಿ ಎಂದು ಹರಕೆ ಹೊರುವಂತಾ ಪರಿಸ್ಥಿತಿ. ಹೆಂಡತಿಯ ಮೇಲೆ ತಪ್ಪು ಹೊರಿಸಲು ಜನಾರ್ದನ ತಯಾರಿಲ್ಲ. ಏನು ಮಾಡುವಂತಿದ್ದಳು ಮೀನಾಕ್ಷಿ? ಅವಳು ಅಲ್ಲಿ, ಇವನು ಇಲ್ಲಿ.

ಯಾವುದು ಆಗಬಾರದೆಂದುಕೊಂಡಿದ್ದರೋ ಅದೇ ಆಗಿತ್ತು. ಮೀನಾಕ್ಷಿಗೆ ನಾಲ್ಕು ತಿಂಗಳು ತುಂಬಿರುವುದನ್ನು ಡಾಕ್ಟರು ಖಚಿತಪಡಿಸಿದ್ದರು. ಮುಖದಲ್ಲಿ ಧಾರೆಧಾರೆಯಾಗಿ ಹರಿಯುತ್ತಿದ್ದ ಬೆವರನ್ನು ಸೆರಗಿನಿಂದ ವರೆಸಿಕೊಳ್ಳುತ್ತಾ ಗೋಗರೆದಿದ್ದಳು ಮೀನಾಕ್ಷಿ,

"ಡಾಕ್ಟ್ರೇ, ಈ ಮಗು ಬೇಡ ನಂಗೆ. ಜನರ ಎದುರು ಹೇಗೆ ಮುಖ ಎತ್ಕೊಂಡು ಓಡಾಡ್ಲಿ?"

"ನಮ್ಮ ತಲೆಗೆ ತರ್ತೀರೇನ್ರೀ? ಮೊದಲೇ ಬುದ್ಧಿ ಇರ್ಬೇಕಿತ್ತು. ಈಗ ಏನೂ ಮಾಡೋ ಹಾಗಿಲ್ಲ..."

ಕುಸಿದು ಹೋಗಿದ್ದ ಜನಾರ್ದನ. ಇನ್ನು ಮುಂದೆ ತಮಗೆ ಮಕ್ಕಳೇ ಆಗುವುದಿಲ್ಲ ಅನ್ನುವ ನಂಬಿಕೆಯಲ್ಲಿದ್ದವರಿಗೆ ಈ ವಯಸ್ಸಲ್ಲಿ ಇದೆಂತಾ ಆಘಾತ? ಜನಾರ್ದನನಿಗೆ ಆಗಲೇ ಐವತ್ತರ ಆಸುಪಾಸು. ಜನರ ವಿಚಾರ ಹಾಳಾಗಲಿ. ಮಗಳು ಏನೆನ್ನುತ್ತಾಳೆ? ಅವಳಿಗೆ ಮುಖ ತೋರಿಸುವುದಾದರೂ ಹೇಗೆ?

ಮನೆಗೆ ವಾಪಸಾಗುವಾಗ ಜನಾರ್ದನ ಮನಸ್ಸು ಗಟ್ಟಿ ಮಾಡಿಕೊಂಡಿದ್ದ. ಆಗುವುದು ಆಗಿಹೋಗಿದೆ. ಇನ್ನೇನಿದ್ದರೂ ಧೈರ್ಯವಾಗಿ ಪರಿಸ್ಥಿತಿಯನ್ನು ಎದುರಿಸುವುದೊಂದೇ ಉಳಿದುಕೊಂಡಿರುವುದು. ಜನ ಏನಾದರೂ ಆಡಿಕೊಳ್ಳಲಿ. ಎಷ್ಟು ದಿನ ಆಡಿಕೊಳ್ಳುತ್ತಾರೆ? ಈ ಪ್ರಪಂಚದಲ್ಲಿ ಇಂತಾದ್ದೆಲ್ಲಾ ಹೊಸದೇನಲ್ಲ. ಮೊದಲನೆಯದೂ ಅಲ್ಲ..

ಆಕಾಶ ಕಳಚಿ ತಲೆಯ ಮೇಲೆ ಬಿದ್ದವಳಂತಿದ್ದ ಹೆಂಡತಿಗೆ ಧೈರ್ಯ ಹೇಳಿದ್ದ ಜನಾರ್ದನ,

"ಇದನ್ನೇ ತಲೆಗೆ ಹಚ್ಕೊಂಡು ಕೊರಗ್ತಿರ್ಬೇಡ ನೀನು. ಮಗಳನ್ನ ಮದುವೆ ಮಾಡಿ ಕಳಿಸಿಕೊಟ್ಟಿದ್ದಾಯ್ತು. ಈ ಮನೆಗೆ ಇನ್ನೊಂದು ಮಗು ಬರುತ್ತೆ ಅಂದ್ರೆ ಯಾಕೆ ಬೇಡ?